**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 871/2023**

ಸಾಕ್ಷಿಯ ಹೆಸರುಃ ಎಂ ದಿನೇಶ ಕುಮಾರ
ತಂದೆ /ಗಂಡನ ಹೆಸರು ಃ ಲೇಟ ಮುದ್ದಪ್ಪ
ವಯಸ್ಸು ಃ **60**
ಉದ್ಯೋಗ ಃ ನಿವೃತ್ತ ಪಿ ಎಸ್ ಐ
ವಾಸ ಸ್ಥಳ ಃ ಹಾಸನ

ಪ್ರಾಸಾ ಃ **1**
ಚಾಸಾ ಃ **1**

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ29.11.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು ಜನವರಿ **2023** ರಿಂದ ಜೂನ್ **2023** ರವರೆಗೆ ಕುಶಾಲನಗರದ ಗ್ರಾಮಾಂತರ ಪೋಲಿಸ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **04.03.2023** ರಂದು ಬೆಳಗಿನ ಜಾವ ವಿಶ್ರಾಂತಿಯಲ್ಲಿರುವಾಗ ಚಾಸಾ **14** ರವರು ಫೋನ್ ಮೂಲಕ ಸೀಗೆಹೊಸೂರು ಗ್ರಾಮದ ಬಳಿ ಒಂದು ನಂ ಇಲ್ಲದ ಟಾಟಾ ಎ ಸಿ ಗೂಡ್ಸ ವಾಹನದಲ್ಲಿ ಜಾನುವಾರುಗಳನ್ನು ತುಂಬಿಕೊಂಡು ಹೋಗುತ್ತಿರುವುದಾಗಿ ಕಂಡು ಬರುತ್ತಿದ್ದು, ಅವುಗಳನ್ನು ದಾಳಿ ಮಾಡಿ ಪರಿಶೀಲಿಸಿಬೇಕಾಗಿ ತಿಳಿಸಿದ ಮೇರೆಗೆ ನಾನು ಚಾಸಾ **13** ರವರೊಂದಿಗೆ ಸ್ಥಳಕ್ಕೆ ಬೇಟಿ ನೀಡಿ ಚಾಸಾ **14** ರವರಿಂದ ಮಾಹಿತಿ ಪಡೆದು ಸ್ಥಳದಲ್ಲಿ ರಸ್ತೆ ಬದಿ ನಿಲ್ಲಿಸಿದ ಟಾಟಾ ಎ ಸಿ ವಾಹನವನ್ನು ಪರಿಶೀಲಿಸಿ ನೋಡಿದಾಗ ಅದರಲ್ಲಿ ಜಾನುವಾರುಗಳು ಇರುವುದು ಕಂಡು ಬಂದಿದ್ದು, ಅದನ್ನು ಮಹಜರ ಮೂಲಕ ಅಮಾನತು ಪಡಿಸಿಕೊಳ್ಳಬೇಕಾಗಿ ಸ್ಥಳದಲ್ಲಿ ವರದಿ ತಯಾರಿಸಿ ಚಾಸಾ **13** ರವರ ಮೂಲಕ ಪ್ರಕರಣ ದಾಖಲಿಸಿ ಕಡತವನ್ನು ಪಡೆದುಕೊಡುವಂತೆ ತಿಳಿಸಿ ವರದಿಯನ್ನು ಕೊಟ್ಟು ಕಳುಹಿಸಿಲಾಯಿತು.

ನಂತರ ಚಾಸಾ **13** ರವರು ಪ್ರಕರಣ ಸಂಖ್ಯೆ **25/23** ಕಲಂ ರೀತಿ ಪ್ರಕರಣ ದಾಖಲಿಸಿ ಕಳಹಿಸಿ ಕೊಟ್ಟ ಪ್ರ ವ ವ ನ್ನು ಹೊಂದಿಕೊಂಡು ಪಂಚರಾದ ಚಾಸಾ **2** ಮತ್ತು **3** ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರಿಗೆ ನೋಟಿಸನ್ನು ಜಾರಿ ಮಾಡಿ ಅವರ ಸಮಕ್ಷಮ ವಾಹನವನ್ನು ಪರಿಶೀಲಿಸಿ ನೋಡಲಾಗಿ ಅದರಲ್ಲಿ **3** ಹೋರಿ ಕರುಗಳು, **3** ಹಸುಗಳು, ಒಟ್ಟು **6** ಜಾನುವಾರುಗಳು ಇದ್ದು ಅವುಗಳನ್ನು ಗೂಡ್ಸ ವಾಹನದಲ್ಲಿ ಸಾಗಾಣಿಕೆ ಮಾಡಲು ಪರವಾನಗಿ ಇದೆಯೆ ಎಂದು ವಾಹನದ ಚಾಲಕನನ್ನು ಕೇಳಲಾಗಿ ಆತ ಇಲ್ಲ ಎಂದು ತಿಳಿಸಿದ್ದು, ಸದರಿ ಜಾನುವಾರುಗಳನ್ನು ತಪಾಸಣೆ ಮಾಡಿ ಅದರಲ್ಲಿ **2** ಹಸುಗಳ ಕಿವಿಗೆ ಟ್ಯಾಗ ಹಾಕಿದ್ದು, ಸದರಿ ಗೂಡ್ಸ ವಾಹನ ಸಂ ಕೆ ಎ **19** ಟಿ ಸಿ **032022** ತಾತ್ಕಲಿಕ ನೊಂದಣಿ ಸಂಖ್ಯೆಯನ್ನು ವಾಹಂದ ಮುಂಭಾಗದ ಗ್ಲಾಸ್ ನ ಮೇಲೆ ಇತ್ತು. ಸದರಿ ವಾಹನಕ್ಕೆ ಯಾವುದೆ ನಂಬರ ಪ್ಲೆಟ ಇರಲಿಲ್ಲ. ಮಹಜರ ಮೂಲಕ ಜಾನುವಾರುಗಳನ್ನು ಅಮಾನತು ಪಡಿಸಿಕೊಂಡು ಭಾವ ಚಿತ್ರ ತೆಗೆಸಿ ಜಾನುವಾರುಗಳು ಆರೋಪಿ ಹಾಗೂ ವಾಹನವನ್ನು ಮುಂದಿನ ಕ್ರಮಕ್ಕೆ ವಶಕ್ಕೆ ಪಡೆಯಲಾಯಿತು. ಸದರಿ ಮಹಜರನ್ನು ಲ್ಯಾಪಟ್ಯಾಪನಿಂದ ಗಣೀಕರಣಗೊಳಿಸಿ ಠಾಣೆಗೆ ಬಂದು ಪ್ರಿಂಟ ತೆಗೆದು ಪಂಚರ ಸಹಿ ಪಡೆಯಲಾಯಿುತು. **3** ನೇ ಆರೋಪಿಯನ್ನು ವಿಚಾರಣೆ ಮಾಡಲಾಗಿ ಜಾನುವಾರುಗಳನುನ **1** ಮತ್ತು **2** ನೇ ಆರೋಪಿಗಳು ಖರೀದಿಸಿ ಕಸಾಯ ಖಾನೆಗೆ ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದ್ದು **1** ಮತ್ತು **2** ನೇ ಆರೋಪಿಗಳು ಸ್ಥಳದಿಂದ ಓಡಿ ಹೋಗಿರುತ್ತಾರೆ. ಸದರಿ ಮಹಜರನ್ನು ಬೆಳಗ್ಗ **6.30** ರಿಂದ **7.30** ರವೆಗೆ ತಯಾರಿಸಲಾಗಿದೆ.

ಸ್ವತ್ತು ಮತ್ತು ಆರೋಪಿ ಠಾಣೆಗೆ ಬಂದು ಸ್ವತ್ತುಗಳನ್ನು ಠಾಣಾ ಸ್ವತ್ತು ಪಟ್ಟಿ ಸಂ **44/2023** ರಂತೆ ನಮೂದಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅನಮಾನತು ಪಡಿಸಿಕೊಂಡ ಜಾನುವಾರುಗಳನ್ನು ಪರಿಕ್ಷಿಶಿಸಿ ವರದಿ ನೀಡುವಂತೆ ಪಶು ವೈದ್ಯಾದಿಕಾರಿಗಳಿಗೆ ಚಾಸಾ **11** ರವರಿಗೆ ಮನವಿ ಮಾಡಿಕೊಂಡಿದ್ದು ಅವರು ನೀಡಿದ ವರದಿಯನ್ನು ಕಡತಕ್ಕೆ

ಅಳವಡಿಸಿಕೊಂಡಿರುತ್ತೇನೆ. ನಂತರ ಸದರಿ ಜಾನುವಾರುಗಳನ್ನು ಚಾಸಾ **12** ರವರಲ್ಲಿಗೆ ಸಾಕಾಣಿಕೆಗೆ ಮನವಿಯೊಂದಿಗೆ ಚಾಸಾ **13** ರವರೊಂದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ನಂತರ ಅವರು ನೀಡಿದ ಸ್ವೀಕೃತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ **3** ನೇ ಆರೋಪಿ ವಿಚಾರಣೆ ಮಾಡಿ ಅವರಿಂದ ಸ್ವ ಇಚ್ಛಾ ಹೇಳಿಕೆ ಪಡೆದು, ದಸ್ತಗಿರಿ ಕ್ರಮ ಅನುಸರಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸಿಬ್ಬಂದಿ ಹಾಗೂ ಎ ಆರ್ ಆರ್ ಎಸ್ ಎಸ್ ವಾಹನದ ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಎಸ್ ಪಿ ರವರಲ್ಲಿ ಮನವಿ ಮಾಡಿಕೊಂಡಿರುತ್ತೇನೆ. ಚಾಸಾ **2** ರಿಂದ **10** ಹಾಗೂ ಚಾಸಾ **13** ರಿಂದ **15** ರವರ ಹೇಳಿಕೆ ಪಡೆದಿರುತ್ತೇನೆ. ಉಳಿದ ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದ್ದು ಅವರುಗಳು ಪತ್ತೆಯಾಗಿರುವುದಿಲ್ಲ. ಚಾಸಾ **13** ರವರಿಂದ ದಾಳಿ ಸಮಯದಲ್ಲಿ ತೆಗೆದ ಪೋಟೋ ಹಾಗೂ ಸಿ ಡಿ ಸಂಬಂಧಿಸಿದಂತೆ ಅದೇ ದಿನ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ **65** ಬಿ ಅಡಿಯಲ್ಲಿ ಧೃಡೀಕರಣವನ್ನು ಪಡೆದುಕೊಂಡಿರುತ್ತೇನೆ.

ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ತನಿಖೆಯನ್ನು ಚಾಸಾ **18** ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ದೂರಿನಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿಪಿ**-1** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ**-1** ಎ ಎಂದು, ಮಹಜರನ್ನು ನಿಪಿ **2** ಎಂದು , ಸಾಕ್ಷಿ ಸಹಿಯನ್ನು ನಿಪಿ **2** ಎ ಎಂದು,

ಚಾಸಾ **11** ರವರಿಗೆ ಮಾಡಿರುವ ಮನವಿಯನ್ನು ನಿಪಿ **3** ಎಂದು, ಸಾಕ್ಷಿ ಸಹಿಯನ್ನು ನಿಪಿ **3** ಎ ಎಂದು, ಚಾಸಾ **11** ರವರು ನೀಡಿದ ವರದಿಯನ್ನು ನಿಪಿ **4** ಎಂದು, ಸಾಕ್ಷಿ ಸಹಿಯನ್ನು ನಿಪಿ **4** ಎ ಎಂದು, ಚಾಸಾ **12** ರವರಿಗೆ ಜಾನುವಾರುಗಳನ್ನು ಹಸ್ತಾಂತರ ಮಾಡಲು ನೀಡಿರುವ ಮನವಿಯನ್ನು ನಿಪಿ **5** ಎಂದು, ಸಾಕ್ಷಿ ಸಹಿಯನ್ನು ನಿಪಿ **5** ಎ ಎಂದು, ಚಾಸಾ **12** ರವರು ನೀಡಿರುವ ಸ್ವೀಕೃತಿಯನ್ನು ನಿಪಿ **6** ಎಂದು, ಸಾಕ್ಷಿ ಸಹಿಯನ್ನು ನಿಪಿ **6** ಎ ಎಂದು, ಎಸ್ ಪಿ ರವರಿಗೆ ಮಾಡಿರುವ ಮನವಿಯನ್ನು ನಿಪಿ **7** ಎಂದು, ಸಾಕ್ಷಿ ಸಹಿಯನ್ನು ನಿಪಿ **7** ಎ ಎಂದು, **7** ಭಾವ ಚಿತ್ರಗಳನ್ನು ನಿಪಿ **8** ರಿಂದ **14** ಎಂದು, ಸಿ ಡಿ ಯನ್ನು ನಿಪಿ **15** ಎಂದು, ಭಾರತೀಯ ಸಾಕ್ಷ್ಯ ಅಧಿನಿಮದ ಕಲಂ **65** ಬಿ ಅಡಿಯಲ್ಲಿ ನೀಡಿರುವ ಧೃಡೀಕರಣವನ್ನು ನಿಪಿ **16** ಎಂದು , ಸಾಕ್ಷಿ ಸಹಿಯನ್ನು ನಿಪಿ **16** ಎ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎಸ್ ಆರ್ ವಕೀಲರಿಂದ

ನಿಪಿ **1** ನ್ನು ಚಾಸಾ **13** ರವರು ಬರೆದಿರುತ್ತಾರೆ. ಅದನ್ನು ನಾನೇ ಅವರಿಗೆ ಹೇಳಿ ಬರೆಯಿುಸಿರುತ್ತೇನೆ. ದೂರನ್ನು ಘಟನಾ ಸ್ಥಳದಲ್ಲಿ ಬರೆಯಲಾಗಿದೆ. ಕೃತ್ಯದ ಬಗ್ಗೆ ಮಾಹಿತಿ ನನಗೆ **4.30** ಸುಮಾರಿಗೆ ಬಂದಿರುತ್ತದೆ. ಆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆ. ನಾನು ಠಾಣೆಯಿುಂದ ಹೊರಟಾದ ಬೆಳಗ್ಗೆ **4.40** ಗಂಟೆಯಾಗಿರುತ್ತದೆ. ಠಾಣೆಯಿುಂದ ಘಟನಾ ಸ್ಥಳವು ಅಂದಾಜು **10** ಕಿ ಮಿ ದೂರದಲ್ಲಿದೆ ಎಂದರೆ ಸರಿ. ನಾನು ಘಟನಾ ಸ್ಥಳವನ್ನು **4.50** ಅಥವಾ **4.55** ಕ್ಕೆ ತಲುಪಿರುತ್ತೇನೆ.

ನಾವು ಘಟನಾ ಸ್ಥಳಕೆಕ ಹೋದಾಗ ಇ ಆರ್ ಎಸ್ ಎಸ್ ಸಿಬ್ಬಂದಿಗಳಾದ **2** ವ್ಯಕ್ತಿಗಳು, **5** ರಿಂದ **6** ಜನ ಸಾರ್ವಜನಿಕರು ಹಾಗೂ **3** ನೇ ಆರೋಪಿ ಇದ್ದರು. ಅಲ್ಲಿದ್ದಂತಹ ಸಾರ್ವಜನಿಕರು ಚಾಸಾ **2** ರಿಂದ **9** ರವರು ಆಗಿರುತ್ತಾರೆ. ನಾವು ಘಟನಾ ಸ್ಥಳಕ್ಕೆ ಹೋದಾಗ ಜಾನುವಾರುಗಳು ವಾಹನದಲ್ಲಿ ಇದ್ದವು . ಈ ಬಗ್ಗೆ ಮಹಜರನಲ್ಲಿ ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ. ವಾಹನವನ್ನು ಟಾರ್ಪಲ್ ನಿಂದ ಮುಚ್ಚಲಾಗಿತ್ತು. ಟಾರ್ಪಲ್ ಬಣ್ಣ ನನಗೆ ನೆನಪಿಲ್ಲ. ಟಾರ್ಪಲ್ ಸಮೇತ ವಾಹನವನ್ನು ಅಮಾನತು ಪಡಿಸಿಕೊಂಡಿರುತ್ತೇವೆ. ಜಾನುವಾರುಗಳಿಗೆ ಮೂಗು ದಾರ ಹಾಕಲಾಗಿತ್ತು. ಅದನ್ನು ಮಹಜರನಲ್ಲಿ ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ. ಮಹಜರನ್ನು ಟೈಪ ಮಾಡುತ್ತಿರುವುದಾಗ ಅದರ ಫೋಟೋ ತೆಗೆಯಲು ಯಾವುದೆ ತೊಂದರೆ ಇರಲಿಲ್ಲ. ನಿಪಿ **8** ರಲ್ಲಿ ಮಹಜರನ್ನು ಕೈಯಲ್ಲಿ ಬರುವಣಿಗೆ ಮಾಡುವಂತೆ ಕಾಣುತ್ತಿದೆ ಎಂದರೆ ಸಾಕ್ಷಿ ಕಚ್ಚಾ ಮಹಜರನ್ನು ಕೈ ಬರವಣಿಗೆ ಮಾಡಿಕೊಳ್ಳಲಾಗಿದೆ ಎನ್ನುವವರು.

ಆರೋಪಿಗಳು ಜಾನುವಾರುಗಳನ್ನು ಸೀಗೆಹೊಸೂರಿನ ಚಾಸಾ **10** ರವರಿಂದ ತಂದಿರುವುದಾಗಿ ತಿಳಿಸಿರುತ್ತಾರೆ. ಚಾಸಾ **10** ರವರ ಮನೆ ಬಳಿ ಮಹಜರ ಮಾಡುವ ಅವಶ್ಯಕತೆ ಇರಲಿಲ್ಲ. ಮಹಜರನ್ನು ಚಾಸಾ **13** ರವರು ಬೆರಳಚ್ಚು ಮಾಡಿರುತ್ತಾರೆ. ಆ ಬಗ್ಗೆ ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ. ಕೃತ್ಯ ಸ್ಥಳದಿಂದ ವಾಪಸು ಪೋಲಿಸ ಠಾಣೆಗೆ ಬರುವ ವೇಳೆಗೆ ಬೆಳಗ್ಗೆ **7.45** ಗಂಟೆಯಾಗಿರುತ್ತದೆ. ಮಹಜರನ್ನು ಠಾಣೆಯಲ್ಲಿ ಅಂದಾಜು **8.00** ಗಂಟೆಗೆ ನಮೂದಿಸಲಾಗಿದೆ. ಅದನ್ನು ನಮೂದಿಸಲು ಯಾವುದೆ ತೊಂದರೆ ಇರಲಿಲ್ಲ.

ನಾನು ಘಟನಾ ಸ್ಥಳಕೆಕ ಹೋಗಿರಲಿಲ್ಲ ಹಾಗೂ ಮಹಜರ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೆ ತಯಾರಿಸಿದ ಮಹಜರಗೆ ಸಾಕ್ಷಿದಾರರ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗಳಿಂದ ಯಾವುದೆ ಜಾನುವಾರುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೆ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮಹಜರ ಸಮಯದಲ್ಲಿ ಯಾವುದೆ ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ.

ಅದೇ ದಿನ ವೈಯಕ್ತಿಕ ದ್ವೇಶದಿಂದ ಚಾಸಾ **2** ರಿಂದ **5** ರವರು **3** ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಾಗಿದೆ ಎನ್ನುವವರು . ಸದರಿ ಗಲಾಟೆಯನ್ನು ಬಿಡಿಸಲು ಬಂದ **1** ಮತ್ತು **2** ನೇ ಆರೋಪಿಯನ್ನು ಸೇರಿಸಿ ಈ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನೇ ದೂರುದಾರನಾಗಿದ್ದು ಆ ದಿನ ಠಾಣೆಯಲ್ಲಿ ಪಿ ಎಸ್ ರವರು ಇಲ್ಲದ ಕಾರಣ ತನಿಖೆಯನ್ನು ನಾನು ಮುಂದುವರೆಸಿರುತ್ತೇನೆ. ಚಾಸಾ **2** ರಿಂದ **5** ರವರಿಗೆ ಸಹಾಯ ಮಾಡಲು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಸ್ತು ವಾಹನದ ಬಗ್ಗೆ ಎಸ್ ಪಿ ರವರಿಂದ ಸುಳ್ಳು ವರದಿಯನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.